ಅಸಲು ದಾವಾ ಸಂಖ್ಯೆ: **- 141/2022**
ಪಿ.ಡಬ್ಲ್ಯೂ **:-1-**ಬಿ ಎಸ್ ಮಂಜುನಾಥ ಶೆಟ್ಟಿ

ದಿನಾಂಕ: **23-07-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **:-** ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್ ಎನ್ ಪಿ ವಕೀಲರಿಂದ**:-**

1. ಸಾಕ್ಷಿಗೆ ಈಗ ನಿಪಿ-1 ರ ಕ್ರಯ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ನಮೂದಾದ ಪ್ರಕಾರ ಆ ಕ್ರಯ ಕರಾರು ಪತ್ರದ ದಿನಾಂಕವಾದ 11-04-2008 ರಿಂದ 3 ವರ್ಷದ ಅವಧಿಯ ಒಳಗಾಗಿ ಕ್ರಯಪತ್ರವನ್ನು ಮಾಡಿಕೊಳ್ಳಬೇಕಾಗಿತ್ತು ಎಂದರೆ ಸರಿ. ಆ ಪ್ರಕಾರ ಆ ಅವಧಿಯ ಒಳಗಾಗಿ ಆ ಕ್ರಯ ಪತ್ರವನ್ನು ಮಾಡಿಕೊಡುವಂತೆ ಕೋರಿ ನೀವು ಮೃತ ಸತ್ಯನಾರಾಯಣಶೆಟ್ಟಿಯವರಿಗಾಗಲೀ ಅಥವಾ ಈ ಪ್ರತಿವಾದಿಗಾಗಲೀ ನೋಟೀಸ್ ಕೊಟ್ಟಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆ ಅವಧಿಯ ಒಳಗಾಗಿ ಪ್ರತಿವಾದಿಯು ಬಂದು ನಿಪಿ-2 ರ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

2. ನಾನು ಆಧರಿಸುವ ನಿಪಿ-2 ನೇದನ್ನು ದಿ: 02-12-2008 ರಂದು ಬರೆದುಕೊಡಲಾಗಿದೆ ಎಂದರೆ ಸರಿ. ನಿಪಿ-2 ನೇದನ್ನು ಬರೆದುಕೊಟ್ಟಾಗಲೂ ಸಹ ನಿಪಿ-1 ರ ಅವಧಿಯು ಇನ್ನೂ ಪೂರ್ಣಗೊಂಡಿರಲಿಲ್ಲ ಎಂದರೆ ಸರಿ. ಆ ರೀತಿ ನಿಪಿ-2 ನೇದನ್ನು ಬರೆದುಕೊಟ್ಟ ನಂತರವಾದರೂ ಸಹ ನೀವು ಕ್ರಯ ಪತ್ರವನ್ನು ಮಾಡಿಕೊಡುವಂತೆ ಅವರಿಗೆ ನೋಟೀಸ್ ಕೊಟ್ಟಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಿಪಿ-2 ನೇದರಲ್ಲಿ ಪ್ರತಿವಾದಿಯರು ಉಳಿದ ಹಣ ಪಡೆದು ನಮಗೆ ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಟ್ಟ ಕಾರಣ ಪುನಃ ಕ್ರಯ ಪತ್ರಕ್ಕೆ ಪ್ರಯತ್ನಿಸಿರಲಿಲ್ಲ ಎಂದು ನುಡಿಯುತ್ತಾರೆ.

3. ಅದೇ ರೀತಿ ನಿಪಿ-1 ರ ಅವಧಿ ಮುಗಿದ ದಿನಾಂಕದಿಂದ ಈ ದಾವಾ ದಾಖಲು ಮಾಡುವ ದಿನಾಂಕದವರೆಗೂ ಸಹ ಆ ಕ್ರಯ ಕರಾರು ಪತ್ರದ ಪ್ರಕಾರ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಕ್ರಯ ಪತ್ರವನ್ನು ಮಾಡಿಕೊಡುವಂತೆ ಕೋರಿ ನಾನು ಎಂದಿಗೂ ಪ್ರತಿವಾದಿಗಾಗಲೀ ಅಥವಾ ಆತನ ಮೃತ ತಂದೆಗಾಗಲೀ ಲಿಖಿತ ನೋಟೀಸ್ ಕೊಟ್ಟಿರಲಿಲ್ಲ ಎಂದರೆ ಸರಿ.

4. ನಾನು ಹಾಜರುಪಡಿಸಿದ ನಿಪಿ-2 ನೇದರಲ್ಲಿ 1 ನೇ ಪ್ರತಿವಾದಿಯು ಆತನ ಇಬ್ಬರೂ ಅಲ್ಪವಹಿ ಮಕ್ಕಳಾದ ಕವನ ಮತ್ತು ನಾಗರಾಜ್ ಇವರ ಪರವಾಗಿಯೂ ಸಹ ಆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟ ಬಗ್ಗೆ ನಮೂದಿರುತ್ತದೆ ಎಂದರೆ ಸರಿ. ಅದರಲ್ಲಿ ನಮೂದಾದ ಕವನ ಮತ್ತು ನಾಗರಾಜ್ ಇವರು ಈಗ ಪ್ರಾಪ್ತವಯಸ್ಕರಾಗಿರುತ್ತಾರೆ ಎಂದರೆ ಸರಿ. ಆದರೆ ನಾವು ದಾವಾ ದಾಖಲು ಮಾಡುವಾಗ ಆಗಲೀ ಅಥವಾ ದಾವಾ ದಾಖಲು ದಿನಾಂಕದಿಂದ ಈ ದಿನದವರೆಗೆ ಆಗಲೀ ಅವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

5. ಸಾಕ್ಷಿಗೆ ಪುನಃ ನಿಪಿ-2 ನೇದನ್ನು ತೋರಿಸಿ ಅದರ ಮೊದಲ ಪುಟದಲ್ಲಿ ಯಾವುದೇ ವ್ಯಕ್ತಿಗಳ ಸಹಿ ಇರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. ನಿಪಿ-2 ರ ದಾಖಲೆಯನ್ನು ಹೊನ್ನಾಳಿಯ ಉಪನೋಂದಣಾಧಿಕಾರಿಗಳ ಕಚೇರಿಯ ಬಳಿ ಇರುವ ಪ್ರಪತ್ರ ಬರಹಗಾರರಾದ ಪ್ರಕಾಶ್ ಎನ್ನುವವರು ತಯಾರಿಸಿಕೊಟ್ಟಿದ್ದರು. ಆದರೆ ನಿಪಿ-2 ನೇದರಲ್ಲಿ ಆ ರೀತಿ ದಸ್ತಾವೇಜನ್ನು ತಯಾರಿಸಿದ ವ್ಯಕ್ತಿಯ ಹೆಸರಾಗಲೀ ಅಥವಾ ಆ ವ್ಯಕ್ತಿಯ ಸಹಿಯಾಗಲೀ ಇರುವುದಿಲ್ಲ ಎಂದರೆ ಸರಿ.

6. ನಿಪಿ-2 ನೇದರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವ ವ್ಯಕ್ತಿಗಳು ಯಾರು ಸಹ ನಮ್ಮ ಗ್ರಾಮದವರಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಮೃತ ಸತ್ಯನಾರಾಯಣಶೆಟ್ಟಿ ಇವರಿಗೆ ಪರಿಚಯಸ್ಥರಾಗಿದ್ದ ವ್ಯಕ್ತಿಗಳು ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಇರುವ ಸಹಿಗಳು 1 ನೇ ಪ್ರತಿವಾದಿಗಾಗಲೀ ಮತ್ತು ಆತನ ಮೃತ ತಂದೆಯಾದ ಸತ್ಯನಾರಾಯಣಶೆಟ್ಟಿಯವರಿಗಾಗಲೀ ಸಂಬಂಧಿಸಿದ ಸಹಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಹೀಗಿದ್ದರೂ ನಾವು ನಿಪಿ-2 ನೇದನ್ನು ಸುಳ್ಳು ಸಹಿಗಳನ್ನು ಮಾಡಿಕೊಳ್ಳುವುದರ ಮೂಲಕ ಆ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

7. ನಿಪಿ-2 ನೇದರಲ್ಲಿ ಆ ದಾಖಲೆಯನ್ನು ಬರೆಸಿಕೊಂಡ ವ್ಯಕ್ತಿಯಾದ ನನ್ನ ಸಹಿಯೂ ಸಹ ಇಲ್ಲದೇ ಇರುವುದರಿಂದ ಅದು ಕಾನೂನು ಪ್ರಕಾರ ಕರಾರು ಪತ್ರ ಎಂದು ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ನಮೂದಿಸಿದಂತೆ ಯಾವ ಸಿವಿಲ್ ದಾವೆಗಳು ನಡೆಯುತ್ತಿದ್ದವು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

8. ನಿಪಿ-2 ನೇದನ್ನು ರೂ.50/- ಗಳ ಛಾಪಾಕಾಗದದ ಮೇಲೆ ಬರೆಯಲಾಗಿದೆ ಎಂದರೆ ಸರಿ. ಆ ಛಾಪಾಕಾಗದವನ್ನು ನಾನೇ ಖರೀದಿಸಿ ತಂದಿದ್ದೆನು. ನಿಪಿ-1 ನೇದರ ಕಾಲಾಪರಿಮಿತಿ ಅವಧಿಯು ಮುಕ್ತಾಯಗೊಂಡ ನಂತರ ಅದನ್ನು ಹೇಗಾದರೂ ಮಾಡಿ ಊರ್ಜಿತಗೊಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ನಿಪಿ-2 ನೇದನ್ನು ನಾನೇ ಆ ನಂತರ ಸುಳ್ಳು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

9. ನಾನು ಈ ದಾವೆಯಲ್ಲಿ ಆಧರಿಸಿದಂತೆ ಎಂದಿಗೂ ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಹೀಗಿದ್ದರೂ 1 ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಯನ್ನು ಹೇಗಾದರೂ ಮಾಡಿ ಕಬಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.